

# ಈ ರೂಪದರ್ಶಿಗೆ ಬರೀ 85!



ಸಾಮಾನ್ಯವಾಗಿ ರೂಪದರ್ಶಿಯರಿಗೆ ಹರೆಯ ಕರಗುತ್ತಿದ್ದಂತೆ ಮಾಡೆಲಿಂಗ್ ವೃತ್ತಿಯಲ್ಲಿ ಅವಕಾಶಗಳು ಕ್ಷೀಣಿಸುತ್ತಾ ಹೋಗುತ್ತವೆ. ಆದರೆ ಕಾರ್ಮೆನ್ ಡೆಲ್ ಒರಿಫೆಸ್ ಎಂಬಾಕೆಯ ಕಥೆ ಭಿನ್ನ. ಈಕೆ ಈಗಲೂ ಬೇಡಿಕೆಯಲ್ಲಿರುವ ಪ್ರಖ್ಯಾತ ಸೂಪರ್ ಮಾಡೆಲ್ ಹಾಗೂ ನಟಿ. ಪ್ರಾಯದ ತರುಣಿಯಂತೆ ಕಂಗೊಳಿಸುತ್ತಿರುವ ಈಕೆಯ ವಯಸ್ಸು ಗೊತ್ತಾದರೆ ನೀವು ಚಕಿತಗೊಳ್ಳುವುದಂತೂ ಗ್ಯಾರಂಟಿ. ನ್ಯೂಯಾರ್ಕ್‌ನಲ್ಲಿ ಇಟಾಲಿಯನ್ ಮತ್ತು ಹಂಗೇರಿಯನ್ ದಂಪತಿಗಳಿಗೆ ಜನಿಸಿದ ಈ ಸುಂದರಿಯ ವಯಸ್ಸು ಬರೋಬ್ಬರಿ 85 ವರ್ಷಗಳು. ಹದಿನೈದು ವರ್ಷಗಳಿದ್ದಾಗಲೇ ಜನಪ್ರಿಯ ವೋಗ್ ಮ್ಯಾಗಜೀನ್‌ನ ಮುಖಪುಟದಲ್ಲಿ ಮಿಂಚಿದ ಈಕೆ ಸತತವಾಗಿ 70 ವರ್ಷಗಳಿಂದ ಮಾಡೆಲಿಂಗ್‌ನಲ್ಲಿ ಇದ್ದಾಳೆ. ಈಗಲೂ ತನ್ನ ಅಂಗಸೌಷ್ಠವವನ್ನು ಕಾಪಾಡಿಕೊಂಡಿದ್ದಲ್ಲದೆ ಏಳು ದಶಕಗಳಿಂದ ಸಾವಿಗೂ ಸಹ ಮಾನಸಿಕವಾಗಿ ಸಿದ್ಧಳಾಗಿದ್ದಾಳಂತೆ. 'ಬಹಳಷ್ಟು ಜನರಿಗೆ ತಮ್ಮ ಬದುಕನ್ನು ಹೇಗೆ ಸಾಗಿಸಬೇಕು ಎಂಬುದು ಗೊತ್ತಿಲ್ಲ. ಅಲ್ಲದೆ ಹೇಗೆ ಸಾಯಬೇಕೆಂಬುದೂ ಗೊತ್ತಿಲ್ಲ' ಎನ್ನುತ್ತಾಳೆ. ಈಗಲೂ ಸೆಕ್ಸ್ ಅನ್ನು ಆನಂದಿಸುತ್ತಿದ್ದಾಳಂತೆ! ಹೌದು, ನಾನು ಇನ್ನೂ ಕೂಡ ಸೆಕ್ಸ್ ಲೈಫನ್ನು ಸಂತೋಷದಿಂದ ಅನುಭವಿಸುತ್ತಿದ್ದೇನೆ. ಅದನ್ಯಾಕೆ ಬಿಡಬೇಕು? ಎಂದು ಹೇಳುವ ಈಕೆ ಒಂದು ಸಲ ನಿಶ್ಚಿತಾರ್ಥ ಹಾಗೂ ಮೂರು ಬಾರಿ ಮದುವೆ ಮಾಡಿಕೊಂಡಿದ್ದಾಳಂತೆ. ಆದರೆ ಈಗಿರುವ ಪ್ರಿಯಕರನ ಹೆಸರನ್ನು ಹೇಳಲು ಇಷ್ಟಪಡುತ್ತಿಲ್ಲ. ಇಳಿ ವಯಸ್ಸಿನಲ್ಲೂ ಸುಂದರ ದೇಹಸಿರಿ ಕಾಪಾಡಿಕೊಂಡಿರುವ ಗುಟ್ಟೇನು ಎಂದರೆ, 'ನಾನು ಹಸಿವಾದಾಗ ತಿನ್ನುತ್ತೇನೆ, ಕ್ಯಾಲೋರಿಯ ಬಗ್ಗೆ ಎಂದೂ ಚಿಂತಿಸುವುದಿಲ್ಲ' ಎನ್ನುತ್ತಾಳೆ.

■ ವಿನಯ್‌ಕುಮಾರ್ ಬಿ.ಹೆಚ್